**O.S./4661/2021**
**PW.1**

ದಿನಾಂಕಃ **26.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **1** ಮತ್ತು **2** ನೇ ಪ್ರತಿವಾದಿಗಳ ಪರ ಶ್ರೀ. ವಿ .ಎಮ್ .ವಕೀಲರಿಂದಃ

ನಿಪಿ-7 ಸರ್ವೆ ನಂಬರ-70/28 ಕ್ಕೆ ಸೇರಿದ ನಕ್ಷೆ ಎಂದರೆ ಸರಿ. ನಿಪಿ-7 ರಲ್ಲಿ ಪ್ರತಿವಾದಿಯ ಸ್ವತ್ತು ಪೂರ್ವ- ಪಶ್ಚಿಮ- 78, ಉತ್ತರ-ದಕ್ಷಿಣ -50 ಎಂದು ಬರೆದಿದ್ದು ಒಟ್ಟು ವಿಸ್ತೀರ್ಣ 3900 ಚದುರಡಿಗಳು ಬರೆದಿದೆ ಎಂದರೆ ನಿಮ್ಮ ನಕ್ಷೆಯಲ್ಲಿ ಬರೆದಿದ್ದೀರಾ ನಮ್ಮ ನಕ್ಷೆ ಅಲ್ಲ. ಪ್ರತಿವಾದಿಯವರ ಸೈಟ ಪೂರ್ವ- ಪಶ್ಚಿಮ- 78, ಉತ್ತರ-ದಕ್ಷಿಣ-50 ಚದುರಡಿಗಳು ಇದೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ವಾದ ಪತ್ರದ 3 ನೇ ಪ್ಯಾರಾದಲ್ಲಿ ಪೂರ್ವ- ಪಶ್ಚಿಮ- 78 ಮತ್ತು ಉತ್ತರ- ದಕ್ಷಿಣ-50 ಎಂದು ಹೇಳಿದ್ದೀರಾ ಎಂದರೆ ಹೌದು. ಅದೇ ರೀತಿ ನಿಪಿ-7 ನಕ್ಷೆಯಲ್ಲೂ ಸಹ ಅವರ ಸ್ವತ್ತು ಎಷ್ಟು ಇದೇ ಎಂದು ನಮೂದಾಗಿದೆ ನೀವು ನಿಪಿ-7 ನಕ್ಷೆಯನ್ನು ನೋಡಿಯೂ ಸಹ ಸುಳ್ಳು ಹೇಳತ್ತಿದ್ದೀರಿ ಎಂದರೆ ನಾನು ಪ್ರತಿವಾದಿಯವರ ಸ್ವತ್ತನ್ನು ಅಳತೆ ಮಾಡಿಲ್ಲ. ಪ್ರತಿವಾದಿಯ ಸೈಟನಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದು ನಿಮಗೆ ಗೊತ್ತಿದೇಯೆ ಎಂದರೆ ಪ್ರತಿವಾದಿಯವರು ಮಾರಿದ್ದಾರೆ, ಈಗ ಅವರ ಬಳಿ ಸ್ವತ್ತು ಇಲ್ಲ. ಸ್ಕೆಚನಲ್ಲಿ ತೋರಿಸಿರುವ ಪೂರ್ವದ ಭಾಗ-17X50 ಅಡಿಗಳಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದು 3 ನೆ ಸೈಟ್. ಅದು 3 ನೇ ಸೈಟ ಅಲ್ಲ ಅದು 78 ಅಡಿ ಉದ್ದ ಇರುವ ಭಾಗದ ಒಳಗಡೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-7

ರ ಸರ್ವೆ ನಂಬರ-45/15 ರ ಪಶ್ಚಿಮದ ದಿಕ್ಕಿನ ಕೆಳಗಡೆ ಅಂದರೆ ದಕ್ಷಿಣದ ಭಾಗದ ಕಡೆ ಯಾರಿದ್ದಾರೆ ಎಂದರೆ ಅದನ್ನು ಮಾರಿದ್ದಾರೆ. ನಿಪಿ-7 ರ 16X50 ಮಧ್ಯದ ಭಾಗದಲ್ಲಿ ದಾನಪ್ಪರವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಅವರು ನಮ್ಮ ಹಿಂದಿನ ಸೈಟನಲ್ಲಿ ಇದ್ದಾರೆ. ನಿಪಿ-7 ರ 35X45 ರ ಭಾಗದಲ್ಲಿ ದೀಪಕರವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಅವರು ಆ ಕಡೆ ಇದ್ದಾರೆ ಹಾಗಾಗಿ ನಾನು ಅದನ್ನು ತಿಳಿದುಕೊಂಡಿಲ್ಲ. ಸಾಕ್ಷಿ ಮುಂದುವರೆದು ನಿಪಿ-7 ನಕ್ಷೆಯೇ ತಪ್ಪಿದೆ ಎಂದು ಹೇಳಿರುತ್ತಾರೆ. ವಾದ ಪತ್ರದ ಶೆಡ್ಯೂಲ್ ನಲ್ಲಿ ದಕ್ಷಿಣದ ಕಡೆಗೆ Remaining portion of property No.1 ಎಂದು ನಮೂದಿಸಿದ್ದೀರಾ ಎಂದರೆ Remaining property ಎಂದರೆ ಬೇರೆಯವರದ್ದು ಎಂದು ಹೇಳಿರುವುದು. ಅದು ಯಾರುದ್ದು ಎಂದು ನಿಮಗೆ ಗೊತ್ತಿಲ್ಲ ಎಂದರೆ ಗೊತ್ತಿದ್ದರೆ ನಮೂದಿಸಿರುತ್ತಿದ್ದವಿ. ಅಸಲು ದಾವಾ ಸಂಖ್ಯೆ 1214/2013 ಇದು ಸಹ ಇದೆ ಸ್ವತ್ತಿಗೆ ಸಂಬಂಧಿಸಿದ್ದ ದಾವೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 1214/2013 ರಲ್ಲಿ ವಾದ ಪತ್ರದ ಶೆಡ್ಯೂಲನಲ್ಲಿ ದಕ್ಷಿಣಕ್ಕೆ Remaining portion of Sy.No.70/29 ಎಂದು ತೋರಿಸಿದ್ದೀರಿ ಎಂದರೆ ಹೌದು. ನೀವು ಈ ದಾವೆಯಲ್ಲಿ ಸಲ್ಲಿಸಿರುವ ದಾವಾ ಸ್ವತ್ತಿನ ಶೆಡ್ಯೂಲ್ ಸರಿ ಇಲ್ಲ ತಪ್ಪಾಗಿದೆ ಎಂದರೆ ತಪ್ಪಿರಬಹುದು. ನಿಮ್ಮ ಶೆಡ್ಯೂಲ ಸ್ವತ್ತಿನ ದಕ್ಷಿಣ ದಿಕ್ಕಿಗೆ 15X44 ಅಡಿಗಳಲ್ಲಿ ಬಾಡಿಗೆ ಮನೆಗಳನ್ನು ಕಟ್ಟಿದ್ದೀರಿ ಎಂದರೆ ದಕ್ಷಿಣದ ಭಾಗಕ್ಕೆ ಮಾತ್ರ ಕಟ್ಟಿದ್ದೇವೆ ಅರ್ಧ ಸೈಟ ನಲ್ಲಿ ಮಾತ್ರ ಕಟ್ಟಿದ್ದೇವೆ. ನಾನು ಮುಂದಿನ ಬಾರಿ

ನ್ಯಾಯಾಲಯಕ್ಕೆ ವಿಚಾರಣೆಗೆ ಬರುವಾಗ ಅಳತೆ ಮಾಡಿಕೊಂಡು ಬಂದು ಹೇಳುತ್ತೇನೆ. ನಿಮ್ಮ ವಾದ ಪತ್ರದಲ್ಲಿರುವ 3 ನೆ ಪ್ಯಾರಾದ ಪ್ರಕಾರ 70X50 ಎಂದರೆ ಒಟ್ಟು 3900 ಚದುರಡಿಗಳು ಎಂದರೆ 70X50 ಚದುರಡಿಗಳು. ಗುಣಿಸಿದರೆ ಆ ಪ್ರಕಾರ ಒಟ್ಟು 3900 ಚದುರಡಿಗಳು ಬರುತ್ತದೆ. ನಿಮ್ಮ ಸ್ವತ್ತು ಮತ್ತು ಉತ್ತರಕ್ಕಿರುವ ಪ್ರತಿವಾದಿಗಳ ಸ್ವತ್ತನ್ನು ಅಳತೆ ಮಾಡಲು ಕಮೀಷನರನ್ನು ನೇಮಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಸರಿ.

ಅಸಲು ದಾವಾ ಸಂಖ್ಯೆ: 1214/2013 ಕೇಸನ್ನು ಯಾರು ನಡೆಸಿದ್ದರು ಎಂದರೆ ನಮ್ಮ ತಾಯಿ ಮತ್ತು ನಮ್ಮ ತಮ್ಮ ನಡೆಸಿದ್ದರು.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ,**
**ಬೆಂಗಳೂರು.**